ಭಟ್ಟರನ್ನು ಹಚ್ಚಿಕೊಂಡಳು. ಆದರೆ 'ಅಂಕಲ್'ಎಂದು ಕರೆಯುವಾಗ ಮಾತ್ರ ಏಕೋ ಮನಸ್ಸಿಗೆ ಚುಚ್ಚುತಿತ್ತು.

ಗೋಪಾಲ ಭಟ್ಟರು ಅಡಿಗೆ ಕೆಲಸ, ಅಮ್ಮುವಿನ ಕೆಲಸದಲ್ಲಿ ಬ್ಯುಸಿಯಾಗಿದ್ದರೆ, ಸುಕನ್ಯಾ ಆಫೀಸಿನ ಕೆಲಸದಲ್ಲಿ ನಿರತಳು. ಹೀಗೆ ಸಂಸಾರ ಸಾಗುತಿತ್ತು ಹೆಚ್ಚೇನೂ ಏರಿಳಿತವಿಲ್ಲದೆ. ಸುಕನ್ಯಾಳ ಅಪೇಕ್ಷೆಯಂತೆ ಭಟ್ಟರ ಜುಟ್ಟಿಗೆ ಕತ್ತರಿ ಬಿತ್ತು. ಭಟ್ಟರು ಅಮ್ಮುವಿನಿಂದ ಅಲ್ಪ ಸ್ವಲ್ಪ ಇಂಗ್ಲಿಷ್ ಮಾತನಾಡುವುದನ್ನು ಕಲಿತರು. ಭಟ್ಟರ ವಾಸ ಬೆಂಗಳೂರಿಗೆ ಬದಲಾಯಿಸಿದ್ದನ್ನು ತಿಳಿದ ಜನರು ಮದುವೆ, ಮುಂಜಿ ಮಾಡಿಸಲು ಹುಡುಕಿಕೊಂಡು ಬರತೊಡಗಿದರು. ಭಟ್ಟರು 'ಉದ್ಯೋಗಂ ಪುರುಷ ಲಕ್ಷಣಂ' ಎಂಬ ತತ್ವವನ್ನು ಪಾಲಿಸಿಕೊಂಡು ಬಂದವರು. ಜನರು ದೇವ ಕಾರ್ಯಗಳಿಗೆ ಹುಡುಕಿಕೊಂಡು ಬಂದಾಗ ಸಂತೋಷದಿಂದ ಒಪ್ಪಿಕೊಳ್ಳತೊಡಗಿದರು.

ಸಾಫ್ಟ್‌ವೇರ್ ಇಂಜಿನಿಯರ ಸುಕನ್ಯಾಳಿಗೆ ಮನಸ್ಸಿನಲ್ಲಿನ್ನೂ ವೈಭವನೇ ತುಂಬಿಕೊಂಡಿದ್ದರೂ ಭಟ್ಟರು ಪುರೋಹಿತಿಗೆ ಮಾಡುವುದು ಮಾತ್ರ ಇಷ್ಟವಾಗುತ್ತಿರಲಿಲ್ಲ. ಏನಾದರೂ ಕುಂಟು ನೆಪ ಹೇಳಿ ಒಂದೋ ಪುರೋಹಿತಿಗೆ ಕೆಲಸ ಒಪ್ಪಿಕೊಳ್ಳದಂತೆ, ಇಲ್ಲವೆ ಹೇಗೋ ಒಪ್ಪಿಕೊಂಡ ಕಾರ್ಯಗಳಿಗೂ ಹೋಗದಂತೆ ತಡೆಯುತ್ತಿದ್ದಳು. ಇದರಿಂದ ಭಟ್ಟರು ಮನಸ್ಸಿನಲ್ಲೇ ಒಂಟಿಯಾಗ ತೊಡಗಿದರು, ಕೊರಗತೊಡಗಿದರು. ಭಟ್ಟರನ್ನು ಹೇಗಾದರೂ ಮಾಡಿ 'ಮಾಡರ್ನ್' ಮಾಡ ಹೊರಟ ಸುಕನ್ಯಾ ಭಟ್ಟರ ಉಡುಪಾದ ಪಂಚೆ, ಶಲ್ಯ, ಶರ್ಟ್ ಬದಿಗಿತ್ತು ಪ್ಯಾಂಟ್, ಶರ್ಟ್, ಜುಬ್ಬ ಹಾಕಿಕೊಳ್ಳುವಂತೆ ಒತ್ತಾಯಿಸತೊಡಗಿದಳು. ಮೊದಲ ಬಾರಿಗೆ ಪ್ಯಾಂಟ್ ಹಾಕಿದ ಭಟ್ಟರು 'ಸುಕನ್ಯಾ, ಈ ಪ್ಯಾಂಟ್ ಹಾಕ್ಕಂಡ ನಡೆಯಕೇ ಆತಿಲ್ಲ ಕಾಣ, ಕಾಲನ್ನ ಹಿಡ್ಕಂಡ ಯಾರೋ ಏಳಿತ್ರೆನೂ ಅನ್ನತ, ಎಂತ ಅವಸ್ಥೆ ಇದ' ಎಂದು ವಿಚಿತ್ರವಾಗಿ ಮೊದಲ ಬಾರಿಗೆ ನಡಿಯಲು ಕಲಿತ ಮಕ್ಕಳಂತೆ ಹೆಜ್ಜೆ ಇಡುತ್ತಿದ್ದರು.

ಸುಕನ್ಯಾ ಮಾತ್ರ ಪಟ್ಟು ಬಿಡದೆ 'ಫಸ್ಟ ಫಸ್ಟ ಹಾಂಗೆ ಆತ್ತ, ಮತ್ತ ಸಮ ಆತ್ತ, ನಮ್ಮ ಆಫೀಸಿನವರ ಮನೆಗೆ, ಪಾರ್ಟಿಗೆ ಎಲ್ಲಾ ಹೋಪತ್ತಿಗೆ ಪಂಚೆ ಉಟ್ಕಂಡರೆ ಸಮ ಆತಿಲ್ಲ' ಎಂದು ಒತ್ತಾಯದಿಂದ ಹಾಕಿಸುತ್ತಿದ್ದಳು. ಆಫೀಸ್ ಪಾರ್ಟಿಗೆ ಹೆಚ್ಚಾಗಿ ಸುಕನ್ಯಾ ಮತ್ತು ಅಮ್ಮುವೇ ಹೋಗುತ್ತಿದ್ದರೂ, ಕೆಲವೊಮ್ಮೆ ಭಟ್ಟರನ್ನೂ ಕರೆದುಕೊಂಡು ಹೋಗುತ್ತಿದ್ದಳು. ಪಾರ್ಟಿಯಲ್ಲಿ ಮಾತ್ರ ಎಲ್ಲರೂ ಇಂಗ್ಲಿಷ್ ಮಾತನಾಡುವವರೇ. ಭಟ್ಟರು ಮೂಲೆಯಲ್ಲಿ ಕೂತು ಒಂಟಿಯಾಗಿ ಬಿಡುತ್ತಿದ್ದರು. ಮದುವೆಯಾದರೂ ಎಲ್ಲಾ ರೀತಿಯಲ್ಲೂ ಒಂಟಿಯಾದ ಭಟ್ಟರು ಕಷ್ಟವನ್ನು ಹೇಳಿಕೊಳ್ಳಲಾಗದೆ, ಮೂಕವಾಗಿ ರೋದಿಸತೊಡಗಿದರು. ವಾರಕೊಮ್ಮೆ ಅಮ್ಮ, ಅಪ್ಪನಿಗೆ ಫೋನ್ ಮಾಡಿದರೂ, ಎಲ್ಲವೂ ಸರಿಯಾಗಿದೆ ಎಂದೇ ಹೇಳಿಕೊಳ್ಳುತ್ತಿದ್ದರು. ಮಗನ ಸಂಸಾರ ನೋಡಲು ರಾಮಚಂದ್ರ ಭಟ್ಟರು, ಜಾನಕಿಯಮ್ಮ ಬೆಂಗಳೂರಿಗೆ ಬಂದರು. ಅಲ್ಲಿ ಎಲ್ಲದಕ್ಕೂ ದೂರ ದೂರವಾಗಿ ಉಳಿದ ಸೊಸೆ, ಮಾತೇ ಮರೆತು ಹೋದಂತೆ ಮನೆ ಕೆಲಸವನ್ನೆಲ್ಲ ಮಾಡುವ ಮಗನನ್ನು ಕಂಡ ಅಪ್ಪ, ಅಮ್ಮನಿಗೆ ಹೆಚ್ಚು ಹೊತ್ತು ಇರಲಾಗದೆ ವಾಪಾಸು ಬಂದುಬಿಟ್ಟರು. ಆಗಲೇ ಎಲ್ಲವೂ ಅರ್ಥವಾಗಿತ್ತು.

ಸುಕನ್ಯಾ ಕೆಲಸ ಮಾಡುತ್ತಿದ್ದ ಕಂಪೆನಿಗೆ ಆಸ್ಟ್ರೇಲಿಯಾದ ಒಂದು ದೊಡ್ಡ ಪ್ರಾಜೆಕ್ಟ್ ಸಿಕ್ಕಿದಾಗ, ಸುಕನ್ಯಾಳನ್ನು ಆಸ್ಟ್ರೇಲಿಯಾಕ್ಕೆ 5 ವರ್ಷದ ಮಟ್ಟಿಗೆ ಕಳುಹಿಸಲು ತೀರ್ಮಾನಿಸಿತು. ಖುಷಿ ಖುಷಿಯಿಂದ ಸುಕನ್ಯಾ ಅಮ್ಮುವಿನೊಂದಿಗೆ ಹೊರಡಲು ತಯಾರಾದಳು. ಭಟ್ಟರನ್ನೇನು ಮಾಡುವುದೆಂದು ತೀರ್ಮಾನಕ್ಕೆ ಬರದಾದಳು. ಬೆಂಗಳೂರಿನಲ್ಲೇ ಒಂಟಿಯಾಗಬೇಕಾದರೆ ಇನ್ನು ಬೇರೆ ದೇಶಕ್ಕೆ ಹೋಗಿ ಮಾಡುವುದೇನು? ಎಂಬ ಚಿಂತೆ ಭಟ್ಟರನ್ನು ಕಾಡತೊಡಗಿತು. ಆಸ್ಟ್ರೇಲಿಯಾಕ್ಕೆ ಹೋಗದೆ ಉಳೂರಿಗೆ ಹೋದರೆ ಊರಿನ ಜನರು ಮಾತ್ರ ಅಲ್ಲ, ಮರ ಗಿಡಗಳೂ, ಪ್ರಾಣಿ ಪಕ್ಷಿಗಳೂ ತನ್ನನ್ನು ಕಂಡು ನಕ್ಕಾರು ಎಂದು ತಲೆಯ ಮೇಲೆ ಕೈ ಹೊತ್ತು ಕೂತರು. ಸುಕ್ನಾಳ ಅಪ್ಪ ಅಮ್ಮ ಆಸ್ಟ್ರೇಲಿಯಾಗೆ ಹೊರಡಲು ಸಿದ್ಧಳಾದ ಮಗಳಿಗೆ 'ನೀ ಹೋಪುದಿದ್ದರೆ ಗಂಡನನ್ನು ಕರಕೊಂಡ ಹೋಗ, ಇಲ್ಲದಿದ್ದರೆ ಹೋಗಲೇಬೇಡ, ನಿನ್ನ ಗಂಡ ಹೆಚ್ಚು ಕಲಿದಿದ್ದರೆ ಏನಾಯ್ತು? ನಿನ್ನನ್ನ ಮತ್ತ ಅಮ್ಮುವನ್ನ ಎಷ್ಟು ಚೆಂದ ಮಾಡಿ ಕಂಡಕಂತಯಿದ್ದ, ನೀನೇ ಸಮ ಇಲ್ಲ, ಇನ್ನೂ ವೈಭವನ ಎಣಿಸ್ಕಂತ ಕುತ್ಕಂಡಿದೆ' ಎಂದು ಸುಕನ್ಯಾಳನ್ನು ಒತ್ತಾಯಿಸತೊಡಗಿದರು.

ಅಮ್ಮ, ಅಪ್ಪನ ಒತ್ತಾಯದ ಮೇರೆಗೆ ಸುಕನ್ಯಾ ಗಂಡನಿಗೆ 'ನೀವೂ ನನ್ನ ಒಟ್ಟಿಗೆ ಬನ್ನಿ ಆಸ್ಟ್ರೇಲಿಯಾಗೆ. ನಂಗೂ, ಅಮ್ಮೂಗೂ ಒಂದು ಜೊತೆ ಬೇಕಲ್ಲ?' ಎಂದಾಗ ಹೆಂಗರುಳಿನ ಭಟ್ಟರು ಆಸ್ಟ್ರೇಲಿಯಾಗೆ ಹೋಗಲು ಸಮ್ಮತಿಸಿದರು. ಅಲ್ಲಿ ಹೋಗಿ ಇಂಗ್ಲಿಷ್ ಸರಿಯಾಗಿ ಮಾತನಾಡಲೂ ಬಾರದ ತಾನು ಮಾಡುವುದೇನು ಎಂಬ ಚಿಂತೆಯೂ ಕಾಡತೊಡಗಿತು. ಆಸ್ಟ್ರೇಲಿಯಾಕ್ಕೆ ಹೋಗುವ ಮೊದಲು ಉಳೂರಿಗೆ ಹೋಗಿ ಅಮ್ಮ ಅಪ್ಪನಿಗೆ ನಮಸ್ಕರಿಸಿ, ಸಾಲಿಗ್ರಾಮದ ಗುರು ನರಸಿಂಹ ದೇವರಿಗೆ ಅಡ್ಡಬಿದ್ದು ಮನದಲ್ಲಿಯೇ ರೋದಿಸಿದರು. ಊರ ಜನರು, ಗೆಳೆಯರು ಮದುವೆಯಾಗಿ ಒಂದು ವರ್ಷದೊಳಗೆ ಆಸ್ಟ್ರೇಲಿಯಾಕ್ಕೆ ಹೊರಟ ಗೋಪಾಲ ಭಟ್ಟರ ಅದೃಷ್ಟಕ್ಕೆ ಕರುಬಿ ಗೇಲಿ ಮಾಡಿದಾಗ ಭಟ್ಟರದು ಮೌನದ ಮುಗುಳ್ನಗು ಉತ್ತರವಾಗಿತ್ತು. ಜಾನಕಿಯಮ್ಮನಿಗೆ ಮಾತ್ರ ಮಗನ ಮೂಕ ರೋದನ ಅರ್ಥವಾಗಿದ್ದರೂ ಏನೂ ಮಾಡದ ಸ್ಥಿತಿಯಲ್ಲಿದ್ದರು.



'ಗುರು ನರಸಿಂಹ ಸದಾ ನಿನ್ನನ್ನು ಕಾಪಾಡಲಿ' ಎಂದು ಮನಸಾರೆ ಹಾರೈಸಿ ಮಗನನ್ನು ಬೀಳ್ಕೊಟ್ಟರು ರಾಮಚಂದ್ರ ಭಟ್ಟರು ಮತ್ತು ಜಾನಕಿಯಮ್ಮ.

ಸುಕನ್ಯಾ, ಅಮ್ಮು, ಭಟ್ಟರು ಆಸ್ಟ್ರೇಲಿಯಾದ ಮೆಲ್ಬರ್ನ್‌ಗೆ ಬಂದಿಳಿದಾಗ ಹೊಸ ದೇಶ, ಹೊಸ ಜಾಗ ಕಂಡ ಭಟ್ಟರು ಮತ್ತು ಅಮ್ಮು ಸುಕನ್ಯಾಳ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡರು. ಸುಕನ್ಯಾ ಕೆಲಸ ಮಾಡುತ್ತಿದ್ದ ಕಂಪೆನಿಯವರೇ ಮನೆ, ಮನೆಗೆ ಬೇಕಾಗುವ ಸಾಮಾನೆಲ್ಲ ಹೊಂದಿಸಿಕೊಟ್ಟದ್ದರಿಂದ ಸುಕನ್ಯಾಗೆ ಹೊಸ ಜಾಗಕ್ಕೆ ಹೊಂದಿಕೊಳ್ಳುವುದು ಕಷ್ಟವಾಗಲಿಲ್ಲ. ಅಮ್ಮುವನ್ನೂ ಹತ್ತಿರದ ಶಾಲೆಗೆ ಸೇರಿಸಿದರು. ಹೊಸ ಶಾಲೆಯಲ್ಲಿ ನಾಲ್ಕು ದಿನ ಹೊಂದಿಕೊಳ್ಳಲು ಕಷ್ಟಪಟ್ಟ ಅಮ್ಮು ಹೋಂ ವರ್ಕ್ ಹೆಚ್ಚು ಕೊಡದ ಹೊಸ ಶಾಲೆಯನ್ನು ಇಷ್ಟಪಡತೊಡಗಿದಳು. ಅಮ್ಮುವಿನ ಇಂಗ್ಲಿಷ್ ಮಾತನಾಡುವ ಶೈಲಿಯೂ ಬದಲಾಗತೊಡಗಿತು. ಭಟ್ಟರು ಮಾತ್ರ ಬೆಂಗಳೂರಿನಲ್ಲೇ ಹೊಂದಿಕೊಳ್ಳಲು ಕಷ್ಟಪಟ್ಟವರು ಇನ್ನು ಆಸ್ಟ್ರೇಲಿಯಾದಲ್ಲಿ ಕೇಳಬೇಕೇ? ಮಾಡಲೇನು ಕೆಲಸವಿಲ್ಲದೆ ಹೆಚ್ಚಿನ ಸಮಯವೆಲ್ಲ ಮನೆಯ ಹತ್ತಿರದ ಪಕ್ಕದ ಪಾರ್ಕಿನಲ್ಲಿ ನಡೆಯುತ್ತಲೋ, ಓಡುತ್ತಲೋ ಕಳೆಯುತ್ತಿದ್ದರು. ಯಾರಿಗೇ ಆಗಲಿ ಮಾಡಲು ಕೆಲಸವಿಲ್ಲದೆ ಸಮಯ ಕಳೆಯುವುದು ಬ್ರಹ್ಮನು ಕೊಡುವ ಅತೀ ಕಠಿಣ ಶಿಕ್ಷೆಯಲ್ಲೊಂದು ಎಂದು ಅಂದುಕೊಳ್ಳುತ್ತಿದ್ದರು.

ಅದೊಂದು ಚಳಿಗಾಲದ ಭಾನುವಾರ. ಸುಕನ್ಯಾಳ ಬಾಸ್‌ನ ಮಗುವಿನ ನಾಮಕರಣ. ಬಾಸ್‌ಗೆ ಮದುವೆಯಾಗಿ ಹಲವು ವರ್ಷದ ನಂತರ ಹುಟ್ಟಿದ ಮಗುವದು, ಶಾಸ್ತ್ರೋಕ್ತವಾಗಿ ನಾಮಕರಣ ಮಾಡಲು ತೀರ್ಮಾನಿಸಿ, ದೊಡ್ಡ ಬಳಗವನ್ನೇ ಕರೆದಿದ್ದರು. ಸುಕನ್ಯಾಳೂ ಬಾಸ್‌ಗೆ ಬೇಜಾರಾಗದಿರಲೆಂದು ಗಂಡ ಮತ್ತು ಮಗಳೊಂದಿಗೆ ಹೊರಟಳು. ಅಲ್ಲಿ ಬಾಸ್‌ನ ಪರಿಚಯದವರು 500ಕ್ಕೂ ಹೆಚ್ಚು ಜನರು ನೆರೆದಿದ್ದರು. ಆದರೆ ನಾಮಕರಣದ ಶಾಸ್ತ್ರ ಮಾಡಲು ಬರಹೇಳಿದ್ದ ಪುರೋಹಿತರು ಮಾತ್ರ ನಾಪತ್ತೆಯಾಗಿದ್ದರು. ಏನೋ ಕಾನೂನಿನ ತೊಂದರೆಯಿಂದ ಯಾವುದೋ ಆಫೀಸಿಗೆ ಹೋಗಬೇಕಾಗಿ ಬಂತಂತೆ. ಇನ್ನೇನು ಮಾಡುವುದು? ನಾಮಕರಣದ ಶಾಸ್ತ್ರ ನಡೆಯದೆ ತಲೆಯ ಮೇಲೆ ಕೈಹೊತ್ತು ಕೂತ ಬಾಸ್‌ಗೆ ಯಾರೋ ಕಿವಿಯಲ್ಲಿ ಹೇಳಿದರು, ಸುಕನ್ಯಾಳ ಗಂಡ ಪೌರೋಹಿತ್ಯದಲ್ಲಿ ಪಾರಂಗತರೆಂದು. ಕೂಡಲೇ ಬಾಸ್ ಸುಕನ್ಯಾಳನ್ನು ಕೇಳಿಕೊಂಡಾಗ ಇಲ್ಲವೆನ್ನಲಾಗಲಿಲ್ಲ. ಅಂತೂ ಭಟ್ಟರು ಮದುವೆಯಾದ ನಂತರ ಮೊದಲ ಬಾರಿಗೆ ಹೊರ ದೇಶದಲ್ಲಿ ತಮ್ಮ ಕುಲ ಕಸುಬಿನಲ್ಲಿ ತೊಡಗಿದರು. ಭಟ್ಟರು ಅತ್ಯಂತ ಶ್ರದ್ಧೆಯಿಂದ ನಡೆಸಿದ ಮಗುವಿನ ನಾಮಕರಣ ಸುಕನ್ಯಾಳ ಬಾಸ್ ಮತ್ತು ಇತರರ ಹೊಗಳಿಕೆಗೆ ಪಾತ್ರ ವಾಯಿತು. ನಾಮಕರಣದ ದಕ್ಷಿಣೆಯಾಗಿ ಸಿಕ್ಕಿದ 500 ಡಾಲರ್ ಮತ್ತು ನೆರೆದವರಿಂದ ಸಿಕ್ಕಿದ ಗೌರವ, ಸುಕನ್ಯಾಳ ಹೃದಯದಲ್ಲಿ ಗಂಡನ ಬಗ್ಗೆ ಪ್ರೀತಿ, ಗೌರವ ಮೂಡಿತು. ಸುಕನ್ಯಾಳ ಕಣ್ಣಿನಲ್ಲಿ ಕಂಡ ಮಿಂಚು ಭಟ್ಟರ ಹೃದಯವನ್ನು ಹೊಕ್ಕಿತು.